ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಇದನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ನೀವು ತಪ್ಪು ಮಾಡಿದಿರಿ. ಒಪ್ಪಿಕೊಂಡಿರಬಹುದು. ನಾವು ತಪ್ಪು ಮಾಡಲಿಲ್ಲ, ಒಪ್ಪಿಕೊಳ್ಳಲಿಲ್ಲ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್:- ಇದು ಮೊಸಳೆ ಕಣ್ಣೀರು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಜನತಾ ದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಏನು ಹೇಳಿಕೊಟ್ಟಿದ್ದಾರಲ್ಲ, ಇದು ಸಮರ್ಪಕವಾಗಿಲ್ಲ. ಇದು ಒಂದು ರೀತಿ ಚುನಾವಣೆಯ ಘೋಷಣೆಯಾಗಿದೆ. ಇದರಿಂದ ಏನು ಪ್ರಯೋಜನವಾಗುವುದಿಲ್ಲ. ನಿಜವಾಗಿಯೂ ನಿಮ್ಮ ಸರ್ಕಾರ ಅವರಿಗೆ ಅನುಕೂಲ ಮಾಡಿಕೊಡುವುದರಲ್ಲಿ ವಿಫಲರಾಗಿದ್ದೀರಿ. ಅದರಲ್ಲೇನು ಅನುಮಾನವಿಲ್ಲ. ಒಂದು ಹೇಳಿಕೆ ಕೊಡಬಹುದು. ಪೊಲೀಸ್ ಹಾಕಬಹುದು ಇನ್ನೊಂದು ಹಾಕಬಹುದು. ಇದಲ್ಲ, ಇದು ಕೇವಲ ರಾಜಕೀಯ ಸ್ಟೆಂಟ್ ಆಗುತ್ತದೆ. ಎಲ್ಲಿಯಾದರೂ ಉಂಟೆ.

(ಗೊಂದಲ)

ಅಧ್ಯಕ್ಷರು:- ನಾನು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇವೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು. ನಿಮ್ಮ ಸರ್ಕಾರ ಇದ್ದಾಗ, ಸ್ವಾಮಿ ಸ್ವಲ್ಪ ಕೇಳಿ, ತಾವು ಪತಕ್ಕ ಸಿಟ್ಟು ಮಾಡಿಕೊಳ್ಳುತ್ತೀರಾ? ಅದರಿಂದ ಏನು ಉಪಯೋಗವಾಗುವುದಿಲ್ಲ. ಈಗ ಕೈಲಾಗದವನು ಮೈ ಪರಿಚಿಕೊಂಡ ಎಂಬ ಹಾಗೆ ಆಗುತ್ತದೆ. ಆದ್ದರಿಂದ ತಾವು ದಯವಿಟ್ಟು ಸಿಟ್ಟು ಮಾಡಿಕೊಳ್ಳಬೇಡಿ ಈಗ ಪ್ರಶ್ನೆ ಇರತಕ್ಕಂಥದ್ದು ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನೀವು ಇದನ್ನೆಲ್ಲಾ ಮಾಡಿದಿರಾ, ಅದಕ್ಕೋಸ್ಕರ ಕ್ಷಮೆ ಕೇಳಿದಿರಾ ಎಂದು ಹೇಳತಕ್ಕಂಥ ಮಾತನ್ನು ಹೇಳುತ್ತಿದ್ದೀರಾ. ನಾನು ಹೇಳುತ್ತಿದ್ದೇನೆ. ನಾವು ಕ್ಷಮೆಯನ್ನು ಅದಕ್ಕೋಸ್ಕರ ಕೇಳಲಿಲ್ಲ. ಯಾರಿಗೆ ನೋವಾಗಿದ, ಯಾರಿಗೆ ಗಾಯವಾಗಿದ ಅವರಿಗೆ ರಕ್ಷಣೆ ಕೊಡುವುದರಲ್ಲಿ ಇವತ್ತಿನ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ನಿಮ್ಮ ಡೆಪ್ಯುಟಿ ಕಮಿಷನರಿಗೂ, ನಿಮ್ಮ ಎಸ್.ಪಿ.ಯವರಿಗೂ ಈ ವಿಚಾರ ಗೊತ್ತಿರಲಿಲ್ಲವೋ? They have miserably failed. You are the captain of the team. You must express regret for that. ನೀವು ಇದನ್ನು ಮಾಡಲಿಕ್ಕೆ ತಯಾರಾಗಿಲ್ಲ. ನಾವು ಕೇಳುತ್ತಿರತಕ್ಕಂಥದ್ದು ಇದು, ನೋವಾಗಿದ.

(ಗೊಂದಲ)

ಅದಕ್ಕೋಸ್ಕರ ನಾವು ಪ್ರಶ್ನೆ ಮಾಡುತ್ತಿರತಕ್ಕಂಥದ್ದು.

ಶ್ರೀ ವಾಟಾಳ್ ನಾಗರಾಜ್:- ಬರೆ ಮೊಸಳೆ ಕಣ್ಣೀರಿದು. ಇದರಿಂದ ಏನು ಆಗುವುದಿಲ್ಲ. ನಾನು ತಮಗೆ ದಯವಿಟ್ಟು ಹೇಳುತ್ತಿದ್ದೇನೆ. ಇಡೀ ಮೈಸೂರು ಜಿಲ್ಲೆಯಲ್ಲಿ ಒಂದು ವರ್ಷದಿಂದ ನಡೆದಿರುವ ಘಟನೆಗಳ ಬಗ್ಗೆ ಒಂದು ಸಮಗ್ರ ನ್ಯಾಯಾಂಗ ತನಿಖೆಯನ್ನು ನಡೆಸಿ. ಯಾವ ಯಾವ ಅಧಿಕಾರಿಗಳು ಏನೇನು ಮಾಡಿದ್ದಾರೆ. ತಿಳಿಯುತ್ತ. ಸುಮ್ಮನೆ ಬೇಜವಾಬ್ದಾರಿಯಿಂದ ಇರತಕ್ಕಂಥದ್ದು ಸರಿಯಲ್ಲ. ನಾನು ನಿಮ್ಮ